aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Economics (Paper 2, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Economics

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

2026–27ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ–2

ವಿಷಯ: 22–ಅರ್ಥಶಾಸ್ತ್ರ **ಗರಿಷ್ಠ ಅಂಕಗಳು: 80**

ಸಮಯ: 3–00 ಗಂಟೆಗಳು **ಒಟ್ಟು ಪ್ರಶ್ನೆಗಳು: 44**

ಸೂಚನೆಗಳು: 1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.

2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.

3. ಭಾಗ–'ಎ' ನಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

4. ಭಾಗ–'ಎಫ್' ನಲ್ಲಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆಗಳನ್ನು ನೀಡಲಾಗಿದೆ.

ಭಾಗ–ಎ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5x1=5**

1. ದೈನಂದಿನ ಜೀವನ ವ್ಯವಹಾರಗಳಲ್ಲಿ ಮಾನವನ ಅಧ್ಯಯನದ ಸುತ್ತ ಈ ವಿಷಯವು ಸುತ್ತುತ್ತದೆ.

ಎ) ಇತಿಹಾಸ ಬಿ) ಅರ್ಥಶಾಸ್ತ್ರ ಸಿ) ರಾಜ್ಯಶಾಸ್ತ್ರ ಡಿ) ಸಮಾಜಶಾಸ್ತ್ರ

2. ಸಂಖ್ಯಾತ್ಮಕ ಸಾಧನಗಳು ಇದಕ್ಕೆ ಸಹಾಯಕವಾಗಿದೆ.

ಎ) ಯೋಜನೆಯನ್ನು ಅಭಿವೃದ್ಧಿಪಡಿಸಲು ಬಿ) ಯೋಜನೆಯನ್ನು ನಿರ್ಧರಿಸಲು

ಸಿ) ಯೋಜನೆಯನ್ನು ಜಾರಿಗೊಳಿಸಲು ಡಿ) ಯೋಜನೆಯನ್ನು ರದ್ದುಪಡಿಸಲು

3. ಬ್ರಿಟೀಷರ ಆಳ್ವಿಕೆಯ ಅವಧಿಯಲ್ಲಿ ಕೃಷಿ ವಲಯವು ಸ್ಥಗಿತಗೊಳ್ಳಲು ಪ್ರಮುಖ ಕಾರಣವೇನೆಂದರೆ

ಎ) ಮಹಲ್ವಾರಿ ಪದ್ಧತಿ ಬಿ) ರೈತವಾರಿ ಪದ್ಧತಿ

ಸಿ) ಜಮೀನ್ದಾರಿ ಪದ್ಧತಿ ಡಿ) ಭೂ ಹಿಡುವಳಿ ಮೇಲಿನ ಮಿತಿ

4. ಪಟ್ಟಿ–1ರ ಅಂಶಗಳನ್ನು ಪಟ್ಟಿ–2ರಲ್ಲಿನ ಅಂಶಗಳೊಂದಿಗೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆರಿಸಿ.

ಪಟ್ಟಿ–1 (ಪರ್ಯಾಯ ಮಾರುಕಟ್ಟೆ ವಾಹಿನಿಗಳು)		ಪಟ್ಟಿ–2 (ರಾಜ್ಯಗಳು)	
i	ಅಪನೀ ಮಂಡಿ	a	ತೆಲಂಗಾಣ
ii	ಉಜ್ವಾರ್ ಶಾಂಡಿ	b	ಪಂಜಾಬ್
iii	ರೈತು ಬಜಾರುಗಳು	c	ತಮಿಳುನಾಡು

ಸಂಕೇತಗಳು;

ಎ) i-a, ii-b, iii-c

ಬಿ) i-b, ii-c, iii-a

ಸಿ) i-c, ii-b, iii-a

ಡಿ) i-a, ii-c, iii-b

5. ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸಬೇಕಾಗಿರುವ ವರ್ಷ

ಎ) 2020 ಬಿ) 2030 ಸಿ) 2035 ಡಿ) 2050

aglasem.com For more Question Papers, Sample Papers, Notes & Syllabus visit aglasem.com Page 1 of 4

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ. **5x1=5**

(ಭಾರತ/ ಆವೃತ್ತಿ ಅನುವಿನ್ಯಾಸ/ ವಿದ್ಯಾವಂತ/ ಪ್ರತಿಶತ ರೂಪ/ ಕಾಲಶ್ರೇಣಿ ನಕ್ಷೆ/ ಚೀನಾ)

6. ಅಸತತ ದತ್ತಾಂಶಗಳ ಆವೃತ್ತಿ ವಿತರಣೆಯನ್ನು _____ ಎಂದು ಕರೆಯವರು.
7. ಅಂಕಗಣಿತೀಯ ರೇಖಾ ನಕ್ಷೆಯನ್ನು _____ ಎಂದೂ ಕರೆಯುವರು.
8. ಸೂಚ್ಯಂಕಗಳನ್ನು _____ ದಲ್ಲಿ ವ್ಯಕ್ತಪಡಿಸಲಾಗುತ್ತದೆ.
9. ನಿರುದ್ಯೋಗದ ಮಟ್ಟವು _____ ಯುವಕರಲ್ಲಿ ಅತ್ಯಧಿಕವಾಗಿದೆ.
10. _____ ದೇಶದಲ್ಲಿ ಹೆಚ್ಚಿನ ಪ್ರಮಾಣದ ಶ್ರಮಬಲವು ಕೃಷಿಯಲ್ಲಿ ತೊಡಗಿದೆ.

III. ಹೊಂದಿಸಿ ಬರೆಯಿರಿ. **5x1=5**

11.

A	B
a) ವೈಯಕ್ತಿಕ ಸಂದರ್ಶನ	i) ಯೋಜನಾ ಆಯೋಗದ ಅಧ್ಯಕ್ಷರು
b) ಟಿಪ್ಪಣಿ	ii) ಒಂದು ಧನಾತ್ಮಕ ಅಭಿವೃದ್ಧಿ
c) ಪ್ರಧಾನ ಮಂತ್ರಿ	iii) ಅಧಿಕ ವೆಚ್ಚ
d) ಲಿಂಗ ಸಮಾನತೆ	iv) ಪ್ರಾಥಮಿಕ ವಲಯ
e) ಕೃಷಿ	v) ಕಾರ್ಮಿಕರ ಹಕ್ಕುಗಳ ರಕ್ಷಣೆ
	vi) ಕೋಷ್ಟಕದ ಕೊನೆಯ ಭಾಗ

IV. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ. **5x1=5**

12. ಕಚ್ಚಾ ದತ್ತಾಂಶ ಎಂದರೇನು?
13. ಕೇಂದ್ರೀಯ ಪ್ರವೃತ್ತಿ ಎಂದರೇನು?
14. ಸ್ಪಿಯರಮನ್‌ರವರ ಶ್ರೇಣಿ ಸಹಸಂಬಂಧದ ಸೂತ್ರವನ್ನು ಬರೆಯಿರಿ.
15. IBRD - ವಿಸ್ತರಿಸಿ.
16. ಚೀನಾ ದೇಶದಲ್ಲಿ ಜನಸಂಖ್ಯೆ ಬೆಳವಣಿಗೆ ಕಡಿಮೆಯಾಗಲು ಪ್ರಮುಖ ಕಾರಣ ತಿಳಿಸಿ.

ಭಾಗ–ಬಿ

V. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ. **3x2=6**

17. ಅರ್ಥಶಾಸ್ತ್ರವನ್ನು ಸಾಮಾನ್ಯವಾಗಿ ಯಾವ ಮೂರು ಭಾಗಗಳಲ್ಲಿ ಚರ್ಚಿಸಲಾಗುತ್ತದೆ?
18. ಯಾವುದಾದರೂ ಎರಡು ಆರ್ಥಿಕ ಸಮಸ್ಯೆಗಳನ್ನು ಹೆಸರಿಸಿ.
19. ಸ್ತಂಭ ರೇಖಾಚಿತ್ರ ಮತ್ತು ಆಯತಚಿತ್ರದ ನಡುವಿನ ವ್ಯತ್ಯಾಸ ಬರೆಯಿರಿ.
20. ಕೆಳಗಿನವುಗಳಲ್ಲಿ ಯಾವ ರೀತಿಯ ಸಹಸಂಬಂಧವಿದೆ?

    ಎ) ತರಕಾರಿ ಉತ್ಪಾದನೆ ಮತ್ತು ಬೆಲೆ

    ಬಿ) ತಾಪಮಾನ ಮತ್ತು ಐಸ್‌ಕ್ರೀಂಗಳ ಮಾರಾಟ
21. ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ ಮೊದಲ ನಾಲ್ಕು ಹಂತಗಳನ್ನು ಬರೆಯಿರಿ.

VI. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ. **4x2=8**

22. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ರಫ್ತುಗಳನ್ನು ಪಟ್ಟಿಮಾಡಿ.
23. ಮಾನವ ಬಂಡವಾಳ ನಿರ್ಮಾಣಕ್ಕೆ ಕೊಡುಗೆ ನೀಡುವ ಅಂಶಗಳಾವುವು?
24. ನಿರುದ್ಯೋಗದ ಯಾವುದಾದರೂ ಎರಡು ವಿಧಗಳನ್ನು ಹೆಸರಿಸಿ.
25. ರಾಜು ಶಾಲೆಗೆ ಹೋಗುತ್ತಿದ್ದಾನೆ. ಅವನು ಶಾಲೆಯಲ್ಲಿ ಇಲ್ಲದಿದ್ದಾಗ, ನೀವು ಅವನನ್ನು ಅವನ ಹೊಲದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡುವಿರಿ. ಅವನೊಬ್ಬ ಕಾರ್ಮಿಕನೆಂದು ಪರಿಗಣಿಸುವಿರಾ? ಏಕೆ?
26. ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳ ಅರ್ಥವನ್ನು ಉದಾಹರಣೆಗಳೊಂದಿಗೆ ತಿಳಿಸಿ.
27. ಭಾರತದಲ್ಲಿನ ಯಾವುದಾದರೂ ಎರಡು ಪರಿಸರ ಕಾಳಜಿಗಳನ್ನು ತಿಳಿಸಿ.

ಭಾಗ–ಸಿ

VII. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. **2x4=8**

28. ಜನಗಣತಿ ಮತ್ತು NSSO ಕುರಿತು ಬರೆಯಿರಿ.
29. ವರ್ಗೀಕೃತ ದತ್ತಾಂಶಗಳಲ್ಲಿ 'ಮಾಹಿತಿ ನಶಿಸಿಹೋಗುವಿಕೆ'ಯನ್ನು ವಿವರಿಸಿ.
30. ಈ ಕೆಳಗಿನ ದತ್ತಾಂಶಗಳಿಂದ ಉಹಾತ್ಮಕ ಸರಾಸರಿ ವಿಧಾನವನ್ನು ಬಳಸಿ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ.

X	5	10	15	20	25	30	35	40
f	5	7	9	10	8	6	5	2

31. X ಮತ್ತು Y ಗಳ ನಡುವಿನ ಸಹಸಂಬಂಧ ಗುಣಾಂಕವನ್ನು ಲೆಕ್ಕ ಮಾಡಿ ಮತ್ತು ಅವುಗಳ ಸಂಬಂಧವನ್ನು ವಿಶ್ಲೇಷಿಸಿ.

X	1	3	4	5	7	8
Y	2	6	8	10	14	16

VIII. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. **4x4=16**

32. 'ಬ್ರಿಟೀಷ್ ಆಳ್ವಿಕೆಯ ಅವಧಿಯಲ್ಲಿ ವಿವಿಧ ಸಾಮಾಜಿಕ ಅಭಿವೃದ್ಧಿ ಸೂಚಕಗಳು ಪ್ರೋತ್ಸಾಹದಾಯಕವಾಗಿರಲಿಲ್ಲ'. ಚರ್ಚಿಸಿ.
33. ವ್ಯಾಪಾರ ಮತ್ತು ಹೂಡಿಕೆ ನೀತಿಯ ಸುಧಾರಣೆಗಳನ್ನು ಚರ್ಚಿಸಿ.
34. ಭಾರತದ ಮಾನವ ಬಂಡವಾಳ ನಿರ್ಮಾಣದಲ್ಲಿ ಸರ್ಕಾರದ ಪಾತ್ರವನ್ನು ವಿವರಿಸಿ.
35. ಗ್ರಾಮೀಣಾಭಿವೃದ್ಧಿಯ ಪ್ರಮುಖ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
36. 'ಪರಿಸರದ ಮೇಲಿನ ಋಣಾತ್ಮಕ ಪರಿಣಾಮಗಳ ಸದಾವಕಾಶ ವೆಚ್ಚವು ಹೆಚ್ಚಾಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.
37. ಪಾಕಿಸ್ತಾನದ ಆರ್ಥಿಕಾಭಿವೃದ್ಧಿ ಕಾರ್ಯತಂತ್ರಗಳನ್ನು ವಿಶ್ಲೇಷಿಸಿ.

ಭಾಗ–ಡಿ

IX. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ. **1x6=6**

38. ಈ ಕೆಳಗಿನ ದತ್ತಾಂಶಗಳಿಂದ Q_1, Q_2 ಮತ್ತು Q_3 ಗಳನ್ನು ಕಂಡುಹಿಡಿಯಿರಿ.
    X : 22, 26, 14, 30, 18, 11, 35, 41, 12, 32
39. CPI ಮತ್ತು WPI ಗಳನ್ನು ವಿವರಿಸಿ.

X. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ. **1x6=6**

40. ಆರ್ಥಿಕ ಸುಧಾರಣೆಗಳಿಂದ ಕೃಷಿ ಮತ್ತು ಕೈಗಾರಿಕಾ ವಲಯದ ಮೇಲಾದ ಪರಿಣಾಮಗಳನ್ನು ಚರ್ಚಿಸಿ.
41. ಪಶುಸಂಗೋಪನೆ ಬಗ್ಗೆ ಬರೆಯಿರಿ.

ಭಾಗ–ಇ

XI. ಈ ಕೆಳಗಿನ ಯಾವುದಾದರೂ ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ. **2x5=10**

42. ಕೆಳಗಿನ ದತ್ತಾಂಶಗಳನ್ನು ಪೈ ನಕ್ಷೆಯಲ್ಲಿ ನಿರೂಪಿಸಿ.

ವೆಚ್ಚದ ಬಾಬ್ತುಗಳು	ಖರ್ಚು ಮಾಡಿದ ಮೊತ್ತ (ರೂ.'00 ಗಳಲ್ಲಿ)
ಆಹಾರ	60
ಬಟ್ಟೆ	20
ಇಂಧನ	25
ಮನೆ ಬಾಡಿಗೆ	40
ಇತರೆ	35

43. ಈ ಕೆಳಗಿನ ಪಟ್ಟಿಯಿಂದ ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಗುರುತಿಸಿ.

a) ಲಾರ್ಸನ್ ಮತ್ತು ಟರ್ಬೋ ಲಿ.
b) ಭಾರತ್ ಅರ್ಥ್ ಮೂವರ್ಸ್ ಲಿ.
c) ಎಚ್.ಡಿ.ಎಫ್.ಸಿ ಬ್ಯಾಂಕ್ ಲಿ.
d) ಭಾರತ್ ಎಲೆಕ್ಟ್ರಾನಿಕ್ಸ್ ಲಿ.
e) ರಿಲಯನ್ಸ್ ಇಂಡಸ್ಟ್ರೀಸ್ ಲಿ.
f) ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.
g) ಭಾರ್ತಿ ಏರ್‌ಟೆಲ್ ಲಿ.
h) ಮಾರುತಿ ಸುಜುಕಿ ಇಂಡಿಯಾ ಲಿ.
i) ಹಿಂದುಸ್ಥಾನ್ ಮೆಷಿನ್ ಟೂಲ್ಸ್ ಲಿ.
j) ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿ.

44. ಈ ಕೆಳಗಿನ ಪಟ್ಟಿಯಲ್ಲಿ ಅನೌಪಚಾರಿಕ ಕೆಲಸಗಾರರನ್ನು ಗುರುತಿಸಿ.

a) ಬೇಕರಿ ಮಾಲೀಕ
b) ಕೈಮಗ್ಗದ ನೇಕಾರ
c) SBI ನ ಮ್ಯಾನೇಜರ್
d) ರಸ್ತೆ ಬದಿಯ ಮಾರಾಟಗಾರ
e) ಸರ್ಕಾರಿ ಆಸ್ಪತ್ರೆಯಲ್ಲಿನ ನರ್ಸ್
f) ಸರ್ಕಾರಿ ಶಾಲೆಯ ಶಿಕ್ಷಕ
g) ಬಡಗಿ
h) ಕಂದಾಯ ನಿರೀಕ್ಷಕರು
i) ಆರಕ್ಷಕರು
j) ಕೃಷಿ ಕಾರ್ಮಿಕರು

ಭಾಗ–ಎಫ್

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

42. ಕೋಷ್ಟಕದ ಯಾವುದಾದರೂ ಐದು ಭಾಗಗಳನ್ನು ವಿವರಿಸಿ.

*****